ಸಮರ್ಥಿಸಿಕೊಳ್ಳುವುದನ್ನು ಪೂರ್ಣಿಮಾ  ಅಭ್ಯಾಸ ಮಾಡಿಕೊಂಡಿದ್ದು ಮದುವೆ ಗೊತ್ತಾದ ಮೇಲೆ ಅನಿಸುತ್ತಿತ್ತು ನಾಗಮ್ಮನಿಗೆ. ಅಥವಾ ತಾನು ಹೀಗೆ ಅರ್ಥ ಕಟ್ಟಲು ಶುರು ಮಾಡಿದ್ದು ಮಗಳ ಮದುವೆ ಗೊತ್ತಾದ ನಂತರವಾ? ಎಂತದ್ದೋ ಒಂದು ಎನ್ನುವ ಆಯ್ಕೆಯನ್ನು ಯಾವ ವಿಷಯದಲ್ಲೂ ಈ ಕಾಲದ ಹುಡುಗಿಯರು ಒಪ್ಪುವುದೇ ಇಲ್ಲವಾ? ದಿವಸಾ ಪೇಟೆಗೆ ಹೋಗುವುದು, ಸೀರೆ ಆರಿಸುವುದು, ಮೊಬೈಲಿನಲ್ಲಿ ಫೋಟೊ ತೆಗೆದು ಗಂಡನಾಗುವವನಿಗೆ ರವಾನಿಸುವುದು, ಅವನು ಅಲ್ಲಿ ಕೂತೇ ಹದ ಹೇಳುವುದು, ಕೊನೆಗೂ ಒಂದು ಸೀರೆ ಖಾಯಿಷ್ ಆಯಿತು ಎಂದು ಮಗಳ ಬಾಯಿಂದ ಮೆಚ್ಚುಗೆಯ ಮಾತು ಕೇಳಿದ ಮೇಲೆ ನಾಗಮ್ಮನಿಗೆ ಸದ್ಯ.. ಎನ್ನುವ ಬಿಡುಗಡೆಯ ಭಾವದ ನಿಟ್ಟುಸಿರು. ಪ್ರಾಯದ ಹುಡುಗಿ ಒಬ್ಬಳನ್ನೇ ಸಾವಿರಾರು ರೂಪಾಯಿ ನಗದು ಕೊಟ್ಟು ಬಸ್ಸಿನಲ್ಲಿ ಕಳಿಸಿಕೊಡುವುದು ನಾಗಮ್ಮನಿಗೆ ಸಮ್ಮತವಾಗದೆ ಅವಳ ಜೊತೆ ಪದ್ಮನಾಭನೂ ಬೆಂಗಾವಲಾಗಿ ಹೋಗಬೇಕಾಗಿತ್ತು. ಪೂರ್ಣಿಮಾಳಿಗೆ ಬಸ್ಸಿನ ಓಡಾಟ ಹೊಸದೇನಲ್ಲ. ಹೀಗೆ ಓಡಾಡಿಯೇ ಅವಳು ಬಿ.ಎಸ್ಸಿ. ಮುಗಿಸಿಕೊಂಡಿದ್ದು. ಪೇಟೆಯಲ್ಲಿ ಸುಮಾರು ಜನ ಸ್ನೇಹಿತೆಯರೂ ಅವಳಿಗಿದ್ದಾರೆ. ಅವರಲ್ಲಿ ಒಬ್ಬಿಬ್ಬರನ್ನು ತನ್ನ ಜೊತೆ ಸೀರೆ ಆಯ್ಕೆಗೆ ಕರೆದುಕೊಂಡು ಹೋಗಲು ಪೂರ್ಣಿಮಾಳಿಗೂ ಉತ್ಸುಕತೆ ಇದೆ.

‘ಅದೇನಾದ್ರೂ ಮಾಡ್ಕಾ. ಆದ್ರೆ ಪದ್ನಾಭನ್ನೂ ನಿಂಜೊತೆ ಕರ್ಕಂಡು ಹೋಗ್ಬೇಕು..’ ಕಡ್ಡಿ ಮುರಿದಂತೆ ತಾಕೀತು ಮಾಡಿದ್ದಳು ನಾಗಮ್ಮ.

‘ಹತ್ತಿ ತೂಗೋ ಕಡೆ ನೊಣ ಯಾಕೆ ಉಪಾಸ ಕೂತ್ಗಂಬೇಕು? ಬೇರೆ ಕಸುಬಿಲ್ವಾ? ಅವನು ಮನೆ ಕಡೆ ಕೆಲಸ ನೋಡ್ಲಿ..’

‘ತಲೆಹರಟೆ ಮಾಡ್ಬೇಡ. ನಿನ್ನ ಜವಾಬ್ದಾರಿ ಬೇರೆಯೋರಿಗೆ ಒಪ್ಪಿಸೋ ತನಕ ನಿನ್ನನ್ನ ಕಾಪಾಡ್ಕಂಡಿರೋದು ನಮ್ಮ ಕರ್ತವ್ಯ..’

‘ಓಹೋಹೋ. ದೊಡ್ಡ ದೊಡ್ಡ ಮಾತಾಡ್ತಿದ್ದಿ? ಮುಂಚೆ ನಾನೊಬ್ಬೇ ಓಡಾಡ್ತಿರ್ಲಿಲ್ವೇನೇ? ಮಹಾ..’

‘ಏನೋಪ್ಪ, ಆ ಕಾಲ ಕಳೀತಲ್ಲ? ದಿವಸಾ ಅನ್ನೋ ಹಾಗೆ ಹೆಣ್ಣುಹುಡುಗೀರ ಮೇಲೆ ಅತ್ಯಾಚಾರ, ಅನಾಚಾರ ಅಂತ ಟೀವೀಲಿ ನೋಡ್ತಾನೇ ಇರ್ತೀವಲ್ಲ, ನಮ್ಮ ಎಚ್ಚರಿಕೆ ನಮಗಿರ್ಬೇಕು ಮಾರಾಯ್ತೀ..’

‘ನಿನ್ನ ಮಗ ದೊಡ್ಡ ಬಾಡಿಗಾರ್ಡ್ ನೋಡು. ಒಂದು ಕತ್ತೀನೂ ಜೋತೇಲಿ ಕೊಟ್ಟು ಕಳಿಸು. ಸಮಯಾಂದ್ರೆ ಬೇಕಾಗುತ್ತೆ..’

‘ತಲೆಹರಟೆ ಬೇಡ ಅಂದ್ನಲ್ಲ..’

ಪೂರ್ಣಿಮಾಳಿಗೆ, ಅವಳ ಭಾವೀ ಪತಿಗೆ, ಒಪ್ಪಿತವಾಗುವ ಸೀರೆಯ ಆಯ್ಕೆ ಮುಗಿದು, ಅದಕ್ಕೆ ತಕ್ಕ ಕುಪ್ಪಸ ಹೊಲಿಸುವುದೇ ಸಾವಿರಾರು ರೂಪಾಯಿಯ ಬಾಬತ್ತು ಎಂಬುದನ್ನು ಕೇಳಿದ ನಾಗಮ್ಮ ಮೂಗಿನ ಮೇಲೆ ಬೆರಳಿಟ್ಟುಕೊಂಡಿದ್ದಳು.

‘ಒಂದು ಕುಪ್ಪಸ ಹೊಲಿಸೋಕೆ ಅಷ್ಟೊಂದಾ? ಎಲ್ಲೋ ವರ್ಷಕ್ಕೆರಡು ಸಲ ಹಾಕಿದ್ರೆ ಹೆಚ್ಚೆಚ್ಚು. ದಪ್ಪಾನೋ, ಸಪೂರಾನೋ ಆಗ್ಬಿಟ್ರೆ ಅಂದ್ರೆ ಮತ್ತೆ ಅದು ಮೂಲೆಗೆ ಬಿದ್ದ ಲೆಕ್ಕ. ಯೋಚ್ನೆ ಮಾಡು..’

ಯೋಚನೆ ಮಾಡುವುದಕ್ಕೆ ಏನಿರಲಿಲ್ಲ. ಪೂರ್ಣಿಮಾ ತನಗೆ ಬೇಕಾದ ಅಲಂಕಾರಿಕ ಸಾಮಗ್ರಿಗಳನ್ನು, ಉಡುಗೆ ತೊಡುಗೆಗಳನ್ನು ಖರೀದಿಸುವುದರಲ್ಲಿ ಚೌಕಾಶಿ ಮಾಡುತ್ತಿರಲಿಲ್ಲ. ಮದುವೆ ಅನ್ನೋ ಸಂಭ್ರಮ ಜೀವಮಾನದಲ್ಲಿ ಒಂದು ಸಲ ಎನ್ನುವುದು ಅವಳ ನಿಲುವು. ಅವಳ ಅಗತ್ಯಕ್ಕೆ ಬೇಕಾದ ದುಡ್ಡು ಹೊಂದಿಸಲು ನಾಗಮ್ಮನಿಗೆ ಕಷ್ಟವೇನಿಲ್ಲ. ಆದರೆ ಅತ್ಯಗತ್ಯವಾಗಿದ್ದಕ್ಕೆ ಮಾತ್ರ ಖರ್ಚು ಮಾಡುವ ಸ್ವಭಾವದವಳಿಗೆ ಈ ಕಾಲದವರ ದರ್ಬಾರು ಅತಿರೇಕ ಅನ್ನಿಸಿ ಬಿಡುತ್ತಿತ್ತು. ತಾನು ಮಾತ್ರ ಹೀಗಾ, ಅಥವಾ ತನ್ನ ಕಾಲದವರೆಲ್ಲಾ ಇರುವುದೇ ಹೀಗಾ ಎಂದು ಲೆಕ್ಕ ಹಾಕ ಹೊರಟರೆ ನಾಗಮ್ಮನಿಗೆ ಕಸಿವಿಸಿ. ತನ್ನ ಕಾಲ ಎನ್ನುವುದಕ್ಕೆ ತನಗೆ ಯಾವ ಮಹಾ ವಯಸ್ಸು? ಕಳೆದ ಗೌರಿ ತದಿಗೆಗೆ ನಲವತ್ನಾಲ್ಕು ಕಳೆದು ನಲವತ್ತೈದು ಶುರುವಾಗಿದ್ದು. ಆಗಲೇ ಮುದುಕಿಯಾಗಿದ್ದೇನೆನ್ನುವ ಥರ ಯಾಕೆ ಯೋಚಿಸುತ್ತಿದ್ದೇನೆ? ವಾಸ್ತವವಾಗಿ ವಯಸ್ಸಾಗುವುದು ಅನ್ನುವುದು ದೇಹಕ್ಕಾ ಅಥವಾ ಮನಸ್ಸಿಗಾ? ಇಷ್ಟಕ್ಕೂ ವಯಸ್ಸು ಅಂದರೇನು? ಸರಿದು ಹೋಗುವ ಕಾಲವನ್ನು ಗಣನೆಯಲ್ಲಿ ಇಟ್ಟುಕೊಳ್ಳಲು ಮನುಷ್ಯರೇ ಮಾಡಿಕೊಂಡ ಒಂದು ವ್ಯವಸ್ಥೆ ಪ್ರಕೃತಿಯ ಬದಲಾವಣೆಗೆ ಅನುಸಾರವಾಗಿ ಮಾಡಿಕೊಂಡಿರುವಂತಾದ್ದು...

ಮಗಳು ತನ್ನ ಕೆಲಸ ಎಷ್ಟೋ ಅಷ್ಟು ನೋಡಿಕೊಂಡು ತನ್ನಮ್ಮನನ್ನು ಅವಳಷ್ಟಕ್ಕೆ ಇರಲು ಬಿಡಲಿಲ್ಲ. ಅಮ್ಮನಿಗೆ ಒಪ್ಪುವಂತಾ ಸೀರೆ ಖರೀದಿಸಿ, ಕುಪ್ಪಸ ಹೊಲಿಸಿ, ‘ನೋಡು, ನೀನು ದೊಡ್ಡ ಅಜ್ಜಮ್ಮನ ಥರ ಓಡಾಡ್ಕಂಡಿರ್ಬಾರ್ದು. ನಾ ಹೇಳಿದ ಹೇಗೆ ಕೇಳ್ಬೇಕು..’ ತಾಕೀತು ಮಾಡಿದ್ದಳು.

‘ನನ್ನ ತಂಟೆಗೆ ಬರ್ಬೇಡ ನೀನು. ನಂಗೆ ಅಂತದೆಲ್ಲಾ ಥೌಲು ಇಷ್ಟ ಆಗಲ್ಲ..’

‘ಯಾಕಾಗಲ್ಲ? ನೋಡ್ತೀನಿ ನಾನೂ..’

(ಸಶೇಷ)

## ಮೋಹ ಚುಂಬಿತ ಮಾಯೆ

### ಸರಾಗವಾಗಿ ಓದಿಸಿತು

‘ಮೋಹ ಚುಂಬಿತ ಮಾಯೆ’ (ಕೆ.ಟಿ.ಗಟ್ಟಿ) ಕಾದಂಬರಿ ಒಟ್ಟು 12 ವಾರಗಳ ಕಾಲ ಸರಾಗವಾಗಿ ಓದಿಸಿಕೊಂಡು ಹೋಯಿತು. ಧಾರಾವಾಹಿ ಮೊದ ಮೊದಲು ಮಾಮೂಲಿ ಧಾರಾವಾಹಿಯಂತೆ ಕಂಡರೂ ನಂತರದ ಕಂತುಗಳು, ಕೃಷಿಯಲ್ಲಿ ಇಸ್ರೇಲ್ ಮಾದರಿಯ ವಿನೂತನ ತಂತ್ರಜ್ಞಾನದ ಅಳವಡಿಕೆ ಬಗ್ಗೆ ಚರ್ಚಿಸಿದ ನರಹರಿ, ಅಭಿ ಮತ್ತು ಮುರಾರಿ ಚಿಂತನೆಗಳು ಮೆಚ್ಚುಗೆಯಾಯಿತು.

—ಸುಂದರ್ ಬೆಂಗಳೂರು

### ಆಕರ್ಷಿಸಿತು

ಆರಂಭದಿಂದಲೂ ಕಥೆ ಆಕರ್ಷಿಸಿತು. ಪ್ರಶಾಂತತೆಯಿಂದ ಪ್ರಾರಂಭವಾಗಿ ಸ್ವಾವಲಂಬಿ ದೇಶ ನಿರ್ಮಾಣದ ಪರಿಕಲ್ಪನೆಯ ಪ್ರಯತ್ನದಲ್ಲಿ ಅಂತ್ಯವಾಗುತ್ತದೆ.

—ಕೆ.ಎನ್. ಪ್ರಭಾಕರ ಗುಪ್ತ ಹಾಸನ

### ಟೀವಿ ಧಾರಾವಾಹಿಯಂತಿದೆ

ಮೋಹದ ಮಾಯೆಗೆ ಸಿಲುಕಿ ಸನ್ಯಾಸಿಯಾದ ನರಹರಿ, ಮುಂದೆ ಅಭಿ ಮತ್ತು ಮುರಾರಿ ಸ್ವಾವಲಂಬಿ ಭಾರತದ ಬಗ್ಗೆ ಚಿಂತನೆ ನಡೆಸಿದ್ದು ಚೆನ್ನಾಗಿದೆ. ಇಲ್ಲಿ ಟೆಕ್ ಉದ್ಯೋಗಿಗಳ ಬದುಕು ಬವಣೆಯ ಜತೆ ಆಧ್ಯಾತ್ಮವು ಥಳುಕು ಹಾಕಿದೆ. ಇತ್ತೀಚೆಗಿನ ಟೀವಿ ಧಾರಾವಾಹಿ ನೋಡಿದಂತೆನಿತು.

—ಕೊಹಿಮ ಬಸರಕೋಡು

### ನಿಸ್ಸಾರ ಕಥೆ

ಕಾದಂಬರಿಯಲ್ಲಿ ಹೊಸದೇನೂ ಇಲ್ಲದೆ ನಿಸ್ಸಾರವೆನಿಸಿತು. ಎಲ್ಲ ರಾಜಕಾರಣಿಗಳ ಕನಸು ‘ಇಸ್ರೇಲ್ ಮಾದರಿ’, ಕಥೆಯಲ್ಲಿ ಸೇರಿಕೊಂಡಿದೆ.

—ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ

### ಧಾವಂತದಲ್ಲಿ ಮುಗಿಸಿದ ಹಾಗಿದೆ

ಕೆ.ಟಿ. ಗಟ್ಟಿ ಅವರ ಧಾರಾವಾಹಿ ಓದುಗರನ್ನು ಯಾವಾಗಲೂ ಸಮಚಿತ್ತದಲ್ಲಿರಿಸಿ ಸಮಾಪ್ತಿಯಾಗುತ್ತದೆ. ಆದರೆ ಈ ಸಲ ಧಾವಂತದಲ್ಲಿ ಕಥೆ ಮುಗಿದ ಹಾಗಿದೆ. ಇಡೀ ಧಾರಾವಾಹಿಯೇ ‘ಕಾಲ್ಪನಿಕ’ ಎಂಬಂತಾಗಿದೆ. ಮೋನಪ್ಪ ಅವರ ಚಿತ್ರಗಳು ಸದಾ ಸುಂದರ. ಕೊನೆಯ ಕಂತಿನ ಚಿತ್ರವಂತೂ ಅದ್ಭುತ.

—ಕೆ.ಎಂ. ಮಧ್ವರಾಯ ಬೆಂಗಳೂರು